

# ಶಿಲ್ಪಕಲಾ ವೈಭವದ ಚಟ್ಟರಕಿ

**ಕಲ್ಯಾಣಿ ಚಾಲುಕ್ಯರ ಕಲಾರಾಧನೆಗೆ ಸಾಕ್ಷಿಯಂತಿದೆ ಚಟ್ಟರಕಿಯ ಪುಟ್ಟ ದೇಗುಲ.**

■ ಸುಭಾಸ ಯಾದವಾಡ

ಹನ್ನೆರಡನೇ ಶತಮಾನದಲ್ಲಿ ಕಲ್ಯಾಣಿ ಚಾಲುಕ್ಯರು ನಿರ್ಮಿಸಿದ ಕೆಲವೇ ಕೆಲವು ವಿಷ್ಣು ಮಂದಿರಗಳಲ್ಲಿ ಚಟ್ಟರಕಿಯ ಈ ದೇಗುಲವೂ ಒಂದು. ದೇಗುಲ ಮಾತ್ರವಲ್ಲದೆ, ಕಲಾವರಣದ ಕಾರಣಕ್ಕೂ ಈ ಮಂದಿರ ಕಣ್ಮನ ಸೆಳೆಯುವಂತಿದೆ.

ಚಟ್ಟರಕಿ ವಿಜಯಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನಲ್ಲಿದ್ದ ಒಂದು ಸಣ್ಣ ಊರು. ಈಗ ದೇವರ ಹಿಪ್ಪರಗಿ ತಾಲ್ಲೂಕಿನಲ್ಲಿದೆ. ಹಿಂದೆ ಇದನ್ನು ಚಟ್ಟುರಗಿ ಎಂದು ಕರೆಯುತ್ತಿದ್ದರು. ಈ ಪುಟ್ಟ ಊರಿನ ಮೇಲೆ ಕಲ್ಯಾಣಿ ಚಾಲುಕ್ಯರ ಕಣ್ಣು ಬಿದ್ದಿದ್ದೇ ತಡ, ಇಲ್ಲೊಂದು ಸುಂದರ ಕಲಾಮಂದಿರ ನಿರ್ಮಾಣವಾಯಿತು. ಇದು ಬರೀ ಗುಡಿಯಲ್ಲ, ಶಿಲ್ಪಕಲೆಯ ಅತ್ಯದ್ಭುತ ಅವತರಣ.

12ನೇ ಶತಮಾನದಲ್ಲಿ ರೂಪುತಳೆದ ಈ ಗುಡಿ ಇಂದಿಗೂ ತನ್ನ ಆಕರ್ಷಣೆಯನ್ನು ಉಳಿಸಿಕೊಂಡಿದೆ, ಪ್ರವಾಸಿಗರನ್ನು ಸೆಳೆಯುತ್ತಿದೆ.

ಇಲ್ಲಿರುವ ಪ್ರಾಚೀನ ಗುಡಿಗೆ ದತ್ತಾತ್ರೇಯನ ಗುಡಿ ಎಂದು ಕರೆಯುತ್ತಾರೆ. ವಿಚಿತ್ರವೆಂದರೆ ಇಲ್ಲಿನ ಗರ್ಭಗುಡಿಯಲ್ಲಿ ದತ್ತಾತ್ರೇಯನ ಮೂರ್ತಿಯೇ ಇಲ್ಲ. ಇಲ್ಲಿರುವುದು ಆರು ಕೈಗಳಿರುವ, ಒಂದೇ ಮುಖದ ವಿಷ್ಣುವಿನ ಮೂರ್ತಿ.

ಚಟ್ಟರಕಿ ಮಂದಿರದ ಕಣ್ಮನ ಸೂರೆಗೊಳ್ಳುವ ಸೂಕ್ಷ್ಮ ಕಲಾಕುಸುರಿ ಯಾರನ್ನಾದರೂ ಮಂತ್ರಮುಗ್ಧಗೊಳಿಸುತ್ತದೆ. ಆ ಊರು ತಲುಪಲು ಪಟ್ಟ ಪರಿಶ್ರಮದ ಆಯಾಸವನ್ನು ಕ್ಷಣಾರ್ಧದಲ್ಲಿ ಕರಗಿಸಿಬಿಡುತ್ತದೆ. ಮಂದಿರದಲ್ಲಿ ಗರ್ಭಗುಡಿ, ಅಂತರಾಳ ಹಾಗೂ ಸಭಾಮಂಟಪಗಳಿವೆ. ಸಭಾಮಂಟಪವು ಮಧ್ಯದ ನಾಲ್ಕು ಹಾಗೂ ಸುತ್ತಲಿನ 12 ಕಂಬಗಳ ಮೇಲೆ ಭದ್ರವಾಗಿ ನಿಂತಿದೆ.



ಮಂದಿರಕ್ಕೆ ಮೂರು ದ್ವಾರಗಳಿವೆ. ಇಲ್ಲಿನ ಸೂಕ್ಷ್ಮ ಕೆತ್ತನೆಗಳ ಕೌಶಲವನ್ನು ನೋಡುತ್ತಾ ಸಮಯ ಕಳೆಯುವುದೇ ತಿಳಿಯುವುದಿಲ್ಲ. ಮಂದಿರದ ಹೊರಾವರಣ, ಒಳಾವರಣ ಎಲ್ಲೆಲ್ಲೂ ಕಲೆಯ ಬಲೆ ಹೆಣೆದುಕೊಂಡಿದೆ.

ಮಂದಿರದ ಹೊರ ಗೋಡೆಯ ತುಂಬ ನೃತ್ಯಭಂಗಿಯಲ್ಲಿರುವ ಮದನಿಕೆಯರ ಮೂರ್ತಿಗಳಿವೆ. ಸಿಂಹ–ಆನೆ ಮುಂತಾದ ಪ್ರಾಣಿಗಳು, ವೈವಿಧ್ಯಮಯ ಕಲಾಕುಸುರಿಗಳು ಕಲ್ಯಾಣಿ ಚಾಲುಕ್ಯರ ಕಲೋಪಾಸನೆಯನ್ನು ಸಾರಿ ಹೇಳುತ್ತವೆ. ಮಂದಿರದ ಒಳಗಿನ ಕಂಬಗಳು, ಗೋಡೆಗಳು, ಮೆಟ್ಟಿಲುಗಳೆಲ್ಲವೂ ಕಲೆಯ ರಸಾಸ್ವಾದವನ್ನು ಉಣಬಡಿಸುತ್ತವೆ.

ಸುಮಾರು 900 ವರ್ಷಗಳ ಇತಿಹಾಸ ಈ ಗುಡಿಗಿದೆ. ಕಾಲದ ಹೊಡೆತಕ್ಕೆ ಗುಡಿಯು ತುತ್ತಾಗಿರುವುದು ಅಲ್ಲಲ್ಲಿ ಗೋಚರಿಸುತ್ತದೆ. ಕೆಲವು ಕಡೆ ಶಿಲೆಗಳು ಬಿರುಕುಬಿಟ್ಟಿವೆ, ಸವಕಳಿಗೊಂಡಿವೆ. ಕೆಲವೆಡೆ ಗೋಡೆ ಕುಸಿದಿದ್ದು, ದುರಸ್ತಿಗೊಳಿಸಲಾಗಿದೆ.

ಈ ದೇಗುಲಕ್ಕೆ ಹೋಗುವುದು ಕಷ್ಟಸಾಧ್ಯ. ಈಗೊಂದಿಷ್ಟು ಸಾರಿಗೆ ವ್ಯವಸ್ಥೆಯಾಗಿದೆಯಾದರೂ, ಅದು ಸಾಕಾಗುವಷ್ಟಿಲ್ಲ. ಹೀಗಾಗಿ ಚಟ್ಟರಕಿ ಎಂಬ ಕಲಾಗ್ರಾಮಕ್ಕೆ ಸುಲಭವಾಗಿ ಬಂದು ಹೋಗಲು ವಾಹನ ಸೌಕರ್ಯಗಳನ್ನು ಕಲ್ಪಿಸಬೇಕು. ಒಂದು ಪ್ರವಾಸಿತಾಣವಾಗಲು ಏನೆಲ್ಲಾ ಅನುಕೂಲಗಳು ಬೇಕೋ ಅದನ್ನು ಒದಗಿಸಿದರೆ ಚಟ್ಟರಕಿಯ ಈ ಪುಟ್ಟ ಮಂದಿರವೂ ಹೆಚ್ಚು ಕಲಾರಾಧಕರನ್ನು ತಲುಪಬಹುದು.

ಪ್ರತಿಕ್ರಿಯಿಸಿ: feedback@sudha.co.in